# ‘ಸಂಸ್ಕೃತಿ ಗಾರ್ಡನ್‌ನಂತಿರಬೇಕೆಂದಿದ್ದ ಶೆಣೈ’



ಉಡುಪಿ, ಮಾ. 9: ಸಂಸ್ಕೃತಿ ಎನ್ನುವುದು ಮ್ಯೂಸಿಯಂನಂತಿರಬೇಕೋ? ಗಾರ್ಡನ್‌ನಂತಿರಬೇಕೋ ಎಂದು ಮಣಿಪಾಲದ ಹೆರಿಟೇಜ್ ವಿಲೇಜ್ ಸ್ಥಾಪಕ ವಿಜಯನಾಥ ಶೆಣೈ ಪ್ರಶ್ನಿಸಿಕೊಂಡು ಅದು ಗಾರ್ಡನ್‌ನಂತಿರಬೇಕು ಎಂದು ಹೇಳುತ್ತಿದ್ದರೆಂದು ಸಾಹಿತಿ ಜಯಂತ ಕಾಯ್ಕಿಣಿ ನೆನಪಿಸಿಕೊಂಡರು.

ಹೆರಿಟೇಜ್ ವಿಲೇಜ್‌ನಲ್ಲಿ ಶುಕ್ರವಾರ ವಿಜಯನಾಥ ಶೆಣೈಯವರ ಸ್ಮರಣಾರ್ಥ ಮಾತನಾಡಿದ ಕಾಯ್ಕಿಣಿ, ಮ್ಯೂಸಿಯಂನಲ್ಲಿ ಧೂಳು ತುಂಬಿರುತ್ತದೆ, ಗಾರ್ಡನ್‌ನಲ್ಲಿ ಹೂವು, ಹಣ್ಣುಗಳಿಂದ ತುಂಬಿ ಸದಾ ಜೀವಂತವಾಗಿರುತ್ತದೆ ಎಂಬ ಅಭಿಪ್ರಾಯ ಶೆಣೈಯವರದ್ದಾಗಿತ್ತು ಎಂದರು.

ಚಲನಶೀಲತೆ ಇರುವುದನ್ನು ಸ್ಥಾವರ ಎನುತ್ತೇವೆ, ಸ್ಥಿರವಾಗಿರುವುದನು ಜಂಗಮವೆನುತ್ತೇವೆ. ಶೆಣೈಯವರು ಸ್ಥಾವರದ ಜತೆ ಜಂಗಮವನ್ನು ಕಂಡಿದ್ದರು. ನಾನು ಶೆಣೈಯವರನ್ನು ಭೇಟಿ ಮಾಡಿದ ಸಂದರ್ಭ ರಾಮೋಜಿ ಸಿಟಿಯಲ್ಲಿದ್ದೆ. ಅಲ್ಲಿ ಸ್ಥಿರವಾದ ದೇವಸ್ಥಾನಗಳಿದ್ದವು. ಬೇಕಾದಂತೆ ವಿಗ್ರಹಗಳನ್ನು ಇಡಲಾಗುತ್ತಿತ್ತು. ಇಲ್ಲಿ ಮನುಷ್ಯನಂತೆ ಮಾತನಾಡಬಲ್ಲ ಆಕೃತಿಗಳು ಇದ್ದವು ಎಂದು ಕಾಯ್ಕಿಣಿ ಹೇಳಿದರು. ಹಸ್ತಶಿಲ್ಪ ಟ್ರಸ್ಟ್ ಅಧ್ಯಕ್ಷೆ ಧನ್ವಂತಿ ನಾಯಕ್ ಸ್ವಾಗತಿಸಿದರು.

## ಮನೆಯಲ್ಲಿ ತಾಯ್ತನ...

ಒಮ್ಮೆ ದೇವುಡು ಅವರು ಭಾಷಣದಲ್ಲಿ ನನ್ನ ತಾಯಿ ಶ್ರೇಷ್ಠ ತಾಯಿ ಎಂದರು, ಅನಂತರ ಮಾತನಾಡಿದ ಮಾಸ್ತಿಯವರು ನನ್ನ ತಾಯಿಯೂ ಮಹಾತಾಯಿ ಎಂದರು. ವಿಜಯನಾಥ ಶೆಣೈಯವರು ಮನೆಗಳಲ್ಲಿ ತಾಯ್ತನವನ್ನು ಕಂಡರು. ಸಮಕಾಲೀನ ಕಲೆ, ಕಾವ್ಯ, ತಾತ್ವಿಕತೆ ಎಲ್ಲದಕ್ಕೂ ಆಗತ್ಯದ ಸಂಸ್ಕೃತಿಯನ್ನು ಉಳಿಸುವ ಮೂಲಕ ಶೆಣೈಯವರು ಮುಂದಿನ ಜನಾಂಗಕ್ಕೆ ಕೊಡುಗೆ ನೀಡಿದರು.

– ಜಯಂತ ಕಾಯ್ಕಿಣಿ